# Press Clipping

The Resource Centre

**Publication** : Kannada Prabha
**Date** : May 20, 2016
**Edition** : State
**Page** : 2

---

ಗಿರೀಶ್ ಕಾಸರವಳ್ಳಿ ಕುಟುಂಬದಿಂದ ಮತ್ತೊಬ್ಬರು ನಿರ್ದೇಶನದ ಕ್ಯಾಪು ತೊಟ್ಟಿದ್ದಾರೆ. ಅನನ್ಯ ಕಾಸರವಳ್ಳಿ ನಂತರ ಅಪೂರ್ವ ಕಾಸರವಳ್ಳಿ ನಿರ್ದೇಶನದ 'ನಿರುತ್ತರ' ಚಿತ್ರ ಹಲವು ಕಾರಣಕ್ಕೆ ಸದ್ದು ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ನಿರ್ದೇಶಕ ಅಪೂರ್ವ ಮಾತನಾಡಿದ್ದಾರೆ

# S/o ಕಾಸರವಳ್ಳಿ

## ಭಾವನಾತ್ಮಕ ಸಂಬಂಧಗಳ ಸುತ್ತ

• **ದೇಶಾದ್ರಿ, ಹೊಸ್ಮನೆ**

▪ **ನಿರ್ದೇಶಕನಾಗುವ ನಿಮ್ಮೊಳಗಿನ ಹಂಬಲಕ್ಕೆ ಪ್ರೇರಣೆ ಏನು?**
ಸಿನಿಮಾ ವಾತಾವರಣದಲ್ಲಿಯೇ ಹುಟ್ಟಿ ಬೆಳೆದಿದ್ದು. ಸಹಜವಾಗಿಯೇ ನಿರ್ದೇಶನ, ನಟನೆ, ಫೋಟೋಗ್ರಫಿ ಸೆಳೆತವಿತ್ತು. ಆದರೆ, ಫೋಟೋಗ್ರಫಿ ಎನ್ನುವುದು ನನ್ನೊಳಗೆ ಹುಚ್ಚು ಹಿಡಿಸಿದಷ್ಟು ಬೇರೆ ವಿಷಯ ತಲೆಗೆ ಹೊಕ್ಕಿರಲಿಲ್ಲ. ಸಿನಿಮಾ ಅಧ್ಯಯನಕ್ಕಾಗಿ ಆಸ್ಟ್ರೇಲಿಯಾಕ್ಕೆ ಹೋಗಿ ಬಂದ ಮೇಲೆ ನಿರ್ದೇಶನ ದತ್ತ ಒಲವು ಹೆಚ್ಚಾಯಿತು. ಕತೆ ಹೇಳುವುದು ಮತ್ತು ಕೇಳುವುದು ನನಗೊಂದು ಪ್ಯಾಷನ್. ಹಾಗೆ ಹೇಳುವುದಕ್ಕೆ ಕತೆಗಾರನಾಗುವ ನಿರ್ದೇಶಕನಿಗೆ ಮಾತ್ರ ಸಾಧ್ಯ. ಈ ಕಾರಣಕ್ಕೆ ನಿರ್ದೇಶಕನಾಗುವುದೇ ಸೂಕ್ತ ಎನಿಸಿತು.


ಅಪೂರ್ವ ಕಾಸರವಳ್ಳಿ

▪ **ನೀವು ತಡವಾಗಿ ನಿರ್ದೇಶಕನ ಜವಾಬ್ದಾರಿ ಹೊತ್ತುಕೊಂಡಿದ್ದೀರಿ ಅನಿಸುತ್ತಿಲ್ಲವೇ?**
ಎಲ್ಲದಕ್ಕೂ ಕಾಲ ಕೂಡಿ ಬರಬೇಕು. ಅದಕ್ಕಿಂತ ಮುಖ್ಯವಾಗಿ ನಮ್ಮೊಳಗೊಂದು ನಂಬಿಕೆ, ವಿಶ್ವಾಸ, ಧೈರ್ಯ ಬರಬೇಕು. ಅದು ಬರಬೇಕಾದರೆ, ಅನುಭವ ಮತ್ತು ಕಲಿಕೆ ಮುಖ್ಯ. ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ ಆ ಅನುಭವದ ಮೂಲಕ ಇಲ್ಲಿಗೆ ಬರುವುದಕ್ಕಾಗಿಯೇ ಸ್ವಲ್ಪ ತಡವಾಗಿದ್ದು ಹೌದು. ಹಾಗಂತ ನನಗೆ ಈ ಬಗ್ಗೆ ಯಾವುದೇ ಪಶ್ಚಾತ್ತಾಪ ಇಲ್ಲ.

▪ **'ನಿರುತ್ತರ' ನಿಮ್ಮ ನಿರ್ದೇಶನದ ಮೊದಲ ಚಿತ್ರವಾಗಿದ್ದು ಹೇಗೆ ಮತ್ತು ಯಾಕೆ?**
ನಟಿ ಭಾವನಾ ಅವರು ಒಂದು ಸದಭಿರುಚಿ ಚಿತ್ರ ಮಾಡಬೇಕೆಂದಾಗ ಇದು ಸಾಧ್ಯವಾಯಿತು. ಅದಕ್ಕೆ ತಕ್ಕಂತೆ ಕತೆ ಮತ್ತು ನಿರ್ದೇಶಕರ ಹುಡುಕಾಟದಲ್ಲಿದ್ದರು. ಒಮ್ಮೆ ನಾನು ಸಿಕ್ಕಾಗ ಅವರ ಸಿನಿಮಾ ನಿರ್ಮಾಣದ ಅಭಿರುಚಿ ಹೇಳಿಕೊಂಡರು. ಸಂಗೀತ ಪ್ರಧಾನವಾದ ಚಿತ್ರ ಅವರ ಕನಸಾಗಿತ್ತು. 'ಮಲಯ ಮಾರುತ' ಸೇರಿದಂತೆ ಹಲವು ಚಿತ್ರಗಳನ್ನುಉದಾಹರಿಸಿದ್ದರು. ಆ ರೀತಿಯ ತುಡಿತದಲ್ಲಿ ವಿಕ್ರಮ್ ಹತ್ವಾರ್ ಅವರ ಕತೆ ಸಿಕ್ಕಾಗ ಅವರೇ ನನಗೆ ನಿರ್ದೇಶಕ ಜವಾಬ್ದಾರಿ ಕೊಟ್ಟರು. ನನ್ನ ಮೊದಲ ನಿರ್ದೇಶನಕ್ಕೂ ಈ ಕತೆ ಸೂಕ್ತ ಎನಿಸಿತು.

▪ **ಈ ಚಿತ್ರದ ವಿಶೇಷತೆಗಳು ಏನು?**
ನಾವು ಹೆಚ್ಚು ಸದ್ದು ಮಾಡಿಲ್ಲ. ಆದರೆ, ಇದೊಂದು ಹೊಸ ರೀತಿಯ ಪ್ರಯೋಗ ಅಥವಾ ಪ್ರಯತ್ನ. ಕಮರ್ಷಿಯಲ್ ಚಿತ್ರ ಎನ್ನುವುದಕ್ಕೆ ಇಲ್ಲಿ ಸಾಕಷ್ಟು ಅಂಶಗಳಿವೆ. ಗಂಡ-ಹೆಂಡತಿ, ಗೆಳೆಯ-ಗೆಳತಿ ನಡುವಿನ ಸಂಬಂಧದ ತಾಕಲಾಟ. ಈ ಕಾಲದ ಟ್ರೆಂಡ್‌ಗೆ ಹೆಚ್ಚು ಪ್ರಸ್ತುತ ಎನಿಸುತ್ತಿದೆ. ಕತೆಯ ಪಾತ್ರಗಳಿಗೆ ಕಲಾವಿದರೂ ಅಷ್ಟೇ ಹೊಂದಿಕೆ ಆಗಿದ್ದಾರೆ. ↘ 02

---

ಕನ್ನಡಪ್ರಭ

# S/o ಕಾಸರವಳ್ಳಿ

↙ **ಮೊದಲ ಪುಟದಿಂದ**
ನಿರೂಪಣೆಯ ಶೈಲಿಯೂ ಭಿನ್ನವಾಗಿದೆ. ನೀಲಾದ್ರಿ ಕುಮಾರ್ ಸಂಗೀತ ಕನ್ನಡದ ಸಿನಿಮಾ ಸಂಗೀತಕ್ಕೆ ಹೊಸತನ ನೀಡಲಿದೆ. ಆಸ್ಕರ್ ಪ್ರಶಸ್ತಿ ವಿಜೇತ ರಸುಲ್ ಪುಕ್ಕುಟ್ಟಿ ಅವರ ಹಿನ್ನೆಲೆ ಸಂಗೀತ, ರಾಮಚಂದ್ರ ಅವರ ಕ್ಯಾಮೆರಾ, ಮೋಹನ್ ಸಂಕಲನ ಎಲ್ಲವೂ ಅಚ್ಚುಕಟ್ಟಾಗಿವೆ.

▪ **ಭಾವನಾ ಈ ಚಿತ್ರದ ನಿರ್ಮಾಪಕಿ ಎನ್ನುವ ಕಾರಣಕ್ಕೆ ಅವರೇ ಚಿತ್ರದ ಪ್ರಮುಖ ಪಾತ್ರಕ್ಕೆ ಆಯ್ಕೆಯಾದರೆ?**
ನಟಿ ಭಾವನಾ ಅವರದ್ದು ಇಲ್ಲಿ ಮಧ್ಯ ವಯಸ್ಸಿನ ಗೃಹಿಣಿ ಪಾತ್ರ. ಜತೆಗೆ ಹಿಂದೂಸ್ತಾನಿ ಗಾಯಕಿ. ಈ ಪಾತ್ರಕ್ಕೆ ಕಲಾವಿದರ ಹುಡುಕಾಟ ನಡೆದಾಗ ನನಗೆ ಮಾತ್ರವಲ್ಲ, ಚಿತ್ರ ತಂಡಕ್ಕೆ ತಕ್ಷಣ ಹೊಳೆದ ಹೆಸರು ಭಾವನಾ. ಆ ಪಾತ್ರಕ್ಕೆ ಅವರೇ ಹೇಳಿ ಮಾಡಿಸಿದಂತೆ ಕಂಡರು. ಈ ಕಾರಣಕ್ಕೆ ಅವರು ಈ ಚಿತ್ರದಲ್ಲಿ ಪಾತ್ರ ಮಾಡಿದ್ದಾರೆ ಹೊರತು, ಅವರದ್ದೇ ನಿರ್ಮಾಣ ಎನ್ನುವ ಕಾರಣಕ್ಕಲ್ಲ. ರಾಹುಲ್ ಬೋಸ್, ಕಿರಣ್ ಶ್ರೀನಿವಾಸ್ ಹಾಗೂ ಐಂದ್ರಿತಾ ರೇ ಕೂಡ.

▪ **ಝಿತಾರ್ ವಾದಕ ನೀಲಾದ್ರಿ ಕುಮಾರ್ ಅವರೇ ಈ ಚಿತ್ರಕ್ಕೆ ಬೇಕೆನಿಸಿದ್ದು ಯಾಕೆ?**
ಸಿನಿಮಾಗಳಲ್ಲಿ ರೆಗ್ಯುಲರ್ ಫಾರ್ಮೆಟ್ ಇರಬಾರದು. ಹೊಸ ರೀತಿಯ ಸಿನಿಮಾ ಕಟ್ಟುವ ಕ್ರಿಯೆ ಕಾಣಿಸಿಕೊಳ್ಳಬೇಕು ಎನ್ನುವುದೇ ನಮ್ಮ ಮೊದಲ ಆದ್ಯತೆ ಆಗಿತ್ತು. ಆ ನಿಟ್ಟಿನಲ್ಲಿ ಚಿತ್ರದ ಸಂಗೀತವೂ ಕೂಡ. ನಾನು ಕೂಡ ಶಾಸ್ತ್ರೀಯ ಸಂಗೀತದ ಅಭಿಮಾನಿ. ತಕ್ಷಣ ನೆನಪಾಗಿದ್ದು ನೀಲಾದ್ರಿ ಕುಮಾರ್. ಅರವಿಂದ್ ನೀಲಾದ್ರಿ ಮೂಲಕ ಸಂಪರ್ಕ ಮಾಡಿ, ಇಲ್ಲಿಗೆ ಕರೆತಂದೆವು. ಕವಿರಾಜ್ ಸಾಹಿತ್ಯ. ಎಲ್ಲವೂ ನನ್ನ ನಿರೀಕ್ಷೆಗೂ ಮೀರಿ ಸೊಗಸಾಗಿ ಮೂಡಿಬಂದಿವೆ. ಚಿತ್ರದ ಹಾಡುಗಳಲ್ಲೂ ಹೊಸ ರೀತಿಯಲ್ಲಿ ಸೌಂಡ್ ಮಾಡುತ್ತಿವೆ.

▪ **ರಸೂಲ್ ಪೂಕ್ಕುಟ್ಟಿ ಈ ಚಿತ್ರದ ಮತ್ತೊಂದು ಹೈಲೈಟ್. ಅವರ ಕೆಲಸ ನಿಮಗೆ ಎಷ್ಟು ತೃಪ್ತಿ ತಂದಿದೆ?**
ಇದು ಜರ್ನಿ ಕತೆ. ದೇಶದ ಬೇರೆ ಬೇರೆ ರಾಜ್ಯಗಳನ್ನು ಸುತ್ತುವ ಮತ್ತು ಅಲ್ಲಿನ ಸಂಗೀತದ ಎಲಿಮೆಂಟ್ಸ್‌ಗೆ ತಕ್ಕಂತೆ ಸಿಂಕ್ ಸೌಂಡ್ ಅಗತ್ಯವಿತ್ತು. ಅದನ್ನು ರಸೂಲ್ ಪೂಕ್ಕುಟ್ಟಿ ಅದ್ಭುತವಾಗಿ ತಂದಿದ್ದಾರೆ. ಅವರ ಕೆಲಸದ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ. ನನಗಂತೂ ಅವರ ಕೆಲಸ ನೂರಕ್ಕೆ ನೂರರಷ್ಟು ತೃಪ್ತಿ ತಂದಿದೆ.

▪ **ಚಿತ್ರ ಕಟ್ಟುವಲ್ಲಿ ನಿಮ್ಮ ತಂದೆಯವರದ್ದು ಭಿನ್ನವಾದ ಹಾದಿ. ನಿಮ್ಮದೂ ಸಹ ಅದೇ ಹಾದಿಯೇ?**
ಒಳ್ಳೆಯ ಕತೆಗಳನ್ನು ಸಿನಿಮಾ ಮಾಡಬೇಕೆನ್ನುವುದೇ ನನ್ನ ಆಯ್ಕೆ ಮತ್ತು ಹಾದಿ. ಅವರ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ಇದ್ದೇ ಇರುತ್ತದೆ. ಜತೆಗೆ ಅವರಿಂದ ಕಲಿತ ಅನುಭವವೇ ನನ್ನ ಕೆಲಸಕ್ಕೆ ವರವಾಗಲಿದೆ. ಆದರೆ, ಇಂಥದ್ದೇ ಸಿನಿಮಾ ಮಾಡಬೇಕೆನ್ನುವ ಗಡಿ ನನಗಿಲ್ಲ. ಸೂಕ್ತವಾದ ಕತೆ ಸಿಕ್ಕರೆ ಕಮರ್ಷಿಯಲ್ ಚಿತ್ರ ಮಾಡೋದಕ್ಕೂ ಸಿದ್ಧ. ಇಷ್ಟರಲ್ಲಿ ಇನ್ನೊಂದು ಚಿತ್ರ ಶುರುವಾಗುತ್ತಿದೆ. ಅದು ಪಕ್ಕಾ ಕಮರ್ಷಿಯಲ್ ಚಿತ್ರ.

▪ **ಹೊಸಬರ ಚಿತ್ರಗಳಲ್ಲಿ ಕಾಣುತ್ತಿರುವ ಹೊಸ ತಾಂತ್ರಿಕತೆ, ಹೊಸ ಕತೆಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು?**
ಬೇರೆ ಚಿತ್ರೋದ್ಯಮಗಳಿಗೆ ಹೋಲಿಸಿದರೆ, ನಾವಿನ್ನು ತುಂಬಾ ಹಿಂದೆ ಇದ್ದೇವೆಂಬ ಕೊರಗು ಈಗ ದೂರವಾಗುತ್ತಿದೆ. ಹೊಸಬರು ಗಮನ ಸೆಳೆಯುತ್ತಿದ್ದಾರೆ. 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಯು ಟರ್ನ್' ಈಗ 'ಜಗ್ಗು ದಾದಾ' ಚಿತ್ರಗಳಲ್ಲಿ ಈಗ ಕತೆ ಹೇಳುವ ಕ್ರಮ ಬದಲಾಗಿದೆ. ತಾಂತ್ರಿಕವಾಗಿಯೂ ಸಿನಿಮಾಗಳು ಶ್ರೀಮಂತವಾಗಿವೆ. ಈ ಪ್ರಯತ್ನಗಳು ಸೃಜನಶೀಲತೆಯಿಂದ ಹುಟ್ಟಿಕೊಳ್ಳುತ್ತಿವೆ. ಅದು ಇನ್ನಷ್ಟು ಹೆಚ್ಚಾಗಬೇಕು ಎನ್ನುವುದು ನನ್ನ ಆಶಯ.